# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1035** |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | **16-12-2025** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಸಣ್ಣ ಕೈಗಾರಿಕೆ ವಲಯಗಳ ಬೆಳವಣಿಗೆಗೆ ಪ್ರಸ್ತುತ ಚಾಲ್ತಿಯಲ್ಲಿರುವ ರಾಜ್ಯದ ನೀತಿಗಳು ಮತ್ತು ಪ್ರೋತ್ಸಾಹಗಳು ಎಷ್ಟು ಪರಿಣಾಮಕಾರಿಯಾಗಿವೆ; | ಸಣ್ಣ ಕೈಗಾರಿಕೆ ವಲಯಗಳ ಬೆಳವಣಿಗೆಗೆ ಪ್ರಸ್ತುತ ರಾಜ್ಯದಲ್ಲಿ ಕೈಗಾರಿಕಾ ನೀತಿ 2020-25 ಹಾಗೂ 2025-30 ಗಳು ಚಾಲ್ತಿಯಲ್ಲಿರುತ್ತವೆ. ಸದರಿ ಕೈಗಾರಿಕಾ ನೀತಿಗಳನ್ವಯ ಕಳೆದ ಮೂರು ವರ್ಷಗಳಲ್ಲಿ 2354 ಘಟಕಗಳು ರೂ. 31,098.23 ಲಕ್ಷಗಳ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆದಿರುತ್ತವೆ.<br>**ರೂ.ಲಕ್ಷಗಳಲ್ಲಿ**<br>(see table below) |
| (ಆ) | "ease of doing business" ಉಪಕ್ರಮವು (Initiative) ಸಣ್ಣ ಕೈಗಾರಿಕೆ ವಲಯಗಳಲ್ಲಿ ಪರಿಣಾಮಕಾರಿಯಾಗಿದೆಯೇ ; ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಣ್ಣ ಕೈಗಾರಿಕಾ ವಲಯದಲ್ಲಿ ಶೇಕಡವಾರು ಎಷ್ಟು ಆದಾಯವನ್ನು ಉತ್ಪಾದಿಸಲಾಗಿದೆ; | ಹೌದು ಪರಿಣಾಮಕಾರಿಯಾಗಿದೆ.<br><br>ಮುಂದುವರೆದು, "ease of doing business" ಅಡಿಯಲ್ಲಿ ಕೆಳಕಂಡ ಉಪಕ್ರಮಗಳ (Initiative) ನ್ನು ತೆಗೆದುಕೊಳ್ಳಾಗಿದೆ.<br><br>➢ ಏಕ ಗವಾಕ್ಷಿ ವ್ಯವಸ್ಥೆ (ಎಸ್ ಡಬ್ಲ್ಯುಎಸ್) ಉದ್ಯಮಿಗಳಿಗೆ ಒಂದು ಡಿಜಿಟಲ್ ಪ್ಲಾಟ್ ಫಾರ್ಮ್ ಮೂಲಕ ಅಗತ್ಯವಿರುವ ಎಲ್ಲಾ ಅನುಮತಿಗಳು, ಪರವಾನಗಿಗಳು ಮತ್ತು ಅನುಮೋದನೆಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.<br><br>➢ ಕರ್ನಾಟಕದ ರಾಜ್ಯ ಪೋರ್ಟಲ್ ಗಳಾದ ಏಕ ಗವಾಕ್ಷಿ ವ್ಯವಸ್ಥೆ ಮತ್ತು ಭೂ ಹಂಚಿಕೆಯನ್ನು ಜಾಗತಿಕ ಮತ್ತು ದೇಶೀಯ ಹೂಡಿಕೆದಾರರಿಗೆ ತಡೆರಹಿತ ಅನುಭವವನ್ನು ಒದಗಿಸಲು ಎನ್ ಎಸ್ ಡಬ್ಲ್ಯು ಎಸ್ ಮತ್ತು ಭಾರತ ಸರ್ಕಾರದ ಡಿಪಿಐಐಟಿಯ ಇಂಡಿಯಾ ಇಂಡಸ್ಟ್ರಿಯಲ್ ಲ್ಯಾಂಡ್ ಬ್ಯಾಂಕ್ ನಂತಹ ಕೇಂದ್ರೀಯ ಪೋರ್ಟಲ್ ಗಳೊಂದಿಗೆ ಸಂಯೋಜಿಸಲಾಗಿದೆ. |

| ವರ್ಷ | ಘಟಕಗಳ ಸಂಖ್ಯೆ | ಸಹಾಯಧನ |
|---|---|---|
| 2022-23 | 669 | 7,264.26 |
| 2023-24 | 621 | 9,273 |
| 2024-25 | 1064 | 14,561 |
| **ಒಟ್ಟು** | **2,354** | **31,098.23** |

- ವಲಯ / ಉತ್ಪಾದನಾ ಅವಶ್ಯಕತೆಗಳಿಗೆ ಅನುಗುಣವಾಗಿ ಪೂರ್ವ-ಅನುಮೋದಿತ ಅನುಮತಿಗಳೊಂದಿಗೆ ಆಯ್ದ ಕೆಐಎಡಿಬಿ ಕೈಗಾರಿಕಾ ಪಾರ್ಕ್ ಗಳು / ಪ್ರದೇಶಗಳಲ್ಲಿ ಪ್ಲಗ್ ಮತ್ತು ಪ್ಲೇ ಸೌಲಭ್ಯವನ್ನು ಪರಿಚಯಿಸಲಾಗಿದೆ.

- ಎಲ್ಲಾ ಕೈಗಾರಿಕಾ ಪ್ರದೇಶಗಳು / ಎಸ್ಟೇಟ್‌ಗಳನ್ನು ಒಳಗೊಂಡ ದೃಢವಾದ ಜಿಐಎಸ್ ಆಧಾರಿತ ವೇದಿಕೆ ಮತ್ತು ಭೂ ಹಂಚಿಕೆ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದು ಹೂಡಿಕೆದಾರರಿಗೆ ಭೂಮಿ ಮತ್ತು ಮೂಲಸೌಕರ್ಯ ಲಭ್ಯತೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

- ಸಕಾಲ (ಸಾರ್ವಜನಿಕ ಸೇವಾ ಖಾತರಿ ಕಾಯ್ದೆ) ಅಡಿಯಲ್ಲಿ 1300+ ಕ್ಕೂ ಹೆಚ್ಚು ಸೇವೆಗಳನ್ನು ಸೂಚಿಸಲಾಗಿದ್ದರೆ, ವ್ಯವಹಾರಗಳಿಗೆ ಸಮಯಕ್ಕೆ ಅನುಗುಣವಾಗಿ ಸೇವಾ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯವು ಹೆಚ್ಚಿನ ಸೇವೆಗಳನ್ನು ಗುರುತಿಸಿದೆ, ವಿಶೇಷವಾಗಿ ಜಿಲ್ಲಾ ಮಟ್ಟದ ಅನುಮೋದನೆಗಳು. ಎಂಎಸ್‌ಎಂಇಗಳು ಸೇರಿದಂತೆ ವ್ಯವಹಾರಗಳಿಗೆ ವೆಚ್ಚವನ್ನು ಉಳಿಸಲು ಎಲ್ಲಾ ಪ್ರಮುಖ ವ್ಯಾಪಾರ-ಕೇಂದ್ರಿತ ಸೇವೆಗಳನ್ನು ಈಗ "ಸಮಯಕ್ಕೆ ಅನುಗುಣವಾಗಿ" ಮಾಡಲಾಗಿದೆ.

- ಡಿಜಿಟಲೀಕೃತ ದಾಖಲೆಗಳು ಅಥವಾ ಹಕ್ಕುಗಳು, ವಹಿವಾಟು ಪತ್ರಗಳು ಮತ್ತು ಆಸ್ತಿ ತೆರಿಗೆ ಪಾವತಿ ಬಾಕಿಗಳ ಆನ್ ಲೈನ್ ಮೂಲಕ ಇಡೀ ರಾಜ್ಯಕ್ಕೆ ಆಸ್ತಿ ತೆರಿಗೆದಾರರ ಹೆಸರು, ಖರೀದಿದಾರ / ಮಾರಾಟಗಾರರ ಹೆಸರು, ಸರ್ವೆ ಸಂಖ್ಯೆಯಂತಹ ಹುಡುಕಬಹುದಾದ ಮೆಟಾ ಡೇಟಾದ ಮೂಲಕ ಆನ್ ಲೈನ್ ನಲ್ಲಿ ಲಭ್ಯವಿದೆ. ಇತ್ಯಾದಿ.

- ತಾತ್ಕಾಲಿಕ/ಹೊಸ ವಿದ್ಯುತ್ ಸಂಪರ್ಕವನ್ನು ಪಡೆಯಲು ದಾಖಲೆಗಳನ್ನು ಈ ಕೆಳಗಿನವುಗಳಿಗೆ ಕಡಿಮೆ ಮಾಡಿದೆ:
  - ಬಳಕೆದಾರರ ಗುರುತಿನ ಪುರಾವೆ
  - ಮಾಲೀಕತ್ವ/ಸ್ವಾಧೀನದ ಪುರಾವೆ (ಒಡೆತನದ/ಗುತ್ತಿಗೆ ಪಡೆದ ಆವರಣದ ಸಂದರ್ಭದಲ್ಲಿ) ಮತ್ತು
  - ದೃಢೀಕರಣ ದಾಖಲೆ (ಸಂಸ್ಥೆ ಅಥವಾ ಕಂಪನಿಯ ಸಂದರ್ಭದಲ್ಲಿ)

- ವೃತ್ತಿ ತೆರಿಗೆಯಡಿ ನೈಜ-ಸಮಯದ ನೋಂದಣಿ

- ಕಾರ್ಯಾಚರಣೆಗಾಗಿ ಸಮ್ಮತಿ (ಸಿಎಫ್‌ಒ) ಸಿಂಧುತ್ವವನ್ನು ಹಸಿರು ವರ್ಗಕ್ಕೆ 10 ವರ್ಷಗಳನ್ನಾಗಿ ಮಾಡಲಾಗಿದ್ದರೆ, ಕೆಂಪು ಮತ್ತು ಕಿತ್ತಳೆ ವರ್ಗಗಳಿಗೆ ಕಾರ್ಯಾಚರಣೆಗಾಗಿ ಸಮ್ಮತಿ (ಸಿಎಫ್‌ಒ) ಸಿಂಧುತ್ವವನ್ನು ಅಸ್ತಿತ್ವದಲ್ಲಿರುವ 1 ವರ್ಷದಿಂದ 5 ವರ್ಷಗಳಿಗೆ ವಿಸ್ತರಿಸಲಾಗಿದೆ.

- ಎಂಎಸ್‌ಎಂಇಗಳು "ಹಸಿರು ವರ್ಗ" ಅಡಿಯಲ್ಲಿ ಬರುವ ಕೈಗಾರಿಕೆಗಳಿಗೆ ಪರಿಸರ ಅನುಸರಣೆ ತಪಾಸಣೆಯಿಂದ ವಿನಾಯಿತಿ ನೀಡಲಾಗಿದೆ.
- ಕಾರ್ಖಾನೆಗಳ ಪರವಾನಗಿ (ಮತ್ತು ನವೀಕರಣಗಳು) ಸಿಂಧುತ್ವವನ್ನು ಶುಲ್ಕ ಪಾವತಿಯ ಆಧಾರದ ಮೇಲೆ 15 ವರ್ಷಗಳವರೆಗೆ ಹೆಚ್ಚಿಸಲಾಗಿದೆ.
- ಕಾರ್ಮಿಕ ಮತ್ತು ಪರಿಸರ ಕಾನೂನುಗಳ ಅಡಿಯಲ್ಲಿ ಸ್ವಯಂ ಪ್ರಮಾಣೀಕರಣಗಳ ಪರಿಚಯ.
- ಕಾರ್ಮಿಕ ಕಾನೂನುಗಳ ಅಡಿಯಲ್ಲಿ ರಾತ್ರಿ ಪಾಳಿಯಲ್ಲಿ (24*7) ಕೆಲಸ ಮಾಡಲು ಮಹಿಳಾ ನೌಕರರಿಗೆ ಅನುಮತಿ.
- ತ್ರೈಮಾಸಿಕ ಓವರ್-ಟೈಮ್ ಸಮಯವನ್ನು 75 ಗಂಟೆಗಳಿಂದ 144 ಗಂಟೆಗಳಿಗೆ ಹೆಚ್ಚಿಸಲಾಗಿದೆ.
- ಅಂತಹ ಕಾರ್ಮಿಕರ ಲಿಖಿತ ಒಪ್ಪಿಗೆಯೊಂದಿಗೆ ಮಹಿಳಾ ಕಾರ್ಮಿಕರಿಗೆ ಓವರ್-ಟೈಮ್ ಕೆಲಸ ಮಾಡಲು ಅವಕಾಶ ನೀಡುವುದು.
- 16 ಷರತ್ತುಗಳನ್ನು ನಿಗದಿಪಡಿಸಿದ ಸುರಕ್ಷತೆ ಮತ್ತು ಭದ್ರತಾ ಕ್ರಮಗಳೊಂದಿಗೆ ಮಹಿಳಾ ಕಾರ್ಮಿಕರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶ.
- ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2023 ರ ಸೆಕ್ಷನ್ 51 (ಸಾಪ್ತಾಹಿಕ ಕೆಲಸದ ಸಮಯ) ಮತ್ತು ಸೆಕ್ಷನ್ 54 (ದೈನಂದಿನ ಕೆಲಸದ ಸಮಯ) ನಿಬಂಧನೆಗಳಿಂದ ವಿನಾಯಿತಿ
- ಎಸ್ಕಾಂಗಳು ಮತ್ತು ನೀರು ಸರಬರಾಜು ಏಜೆನ್ಸಿಗಳು ಕರ್ನಾಟಕದಾದ್ಯಂತ ಯೋಜಿತ ನಿಲುಗಡೆಗಳ ಒಟ್ಟು ಅವಧಿ ಮತ್ತು ಆವರ್ತನದ ಮಾಸಿಕ ದತ್ತಾಂಶವನ್ನು ತಮ್ಮ ಅಂತರ್ಜಾಲ ತಾಣಗಳಲ್ಲಿ ಪ್ರಕಟಿಸಲು ಪ್ರಾರಂಭಿಸಿವೆ.
- ಎಲ್ಲಾ ಎಸ್ಕಾಂಗಳು ಮತ್ತು ನೀರು ಸರಬರಾಜು ಏಜೆನ್ಸಿಗಳ ವೆಬ್ಸೈಟ್‌ನಲ್ಲಿ ಬಿಲ್ಲಿಂಗ್ ಚಕ್ರಕ್ಕೆ ಮುಂಚಿತವಾಗಿ (ವಾಣಿಜ್ಯ ಮತ್ತು ಕೈಗಾರಿಕಾ ಬಳಕೆದಾರರಿಗೆ) ಮತ್ತು ಅಸ್ತಿತ್ವದಲ್ಲಿರುವ ಸುಂಕಗಳ ಮಾಹಿತಿ (ಪ್ರತಿ ಕಿಲೋವ್ಯಾಟ್ ಗೆ ರೂ.ಗಳಲ್ಲಿ) ಗ್ರಾಹಕರಿಗೆ ಅಧಿಸೂಚನೆ.
- ಕರ್ನಾಟಕದಾದ್ಯಂತ 11 ಮೀಸಲಾದ ವಾಣಿಜ್ಯ ನ್ಯಾಯಾಲಯಗಳನ್ನು ಸ್ಥಾಪಿಸುವ ಮೂಲಕ ವಾಣಿಜ್ಯ ಸಂಘರ್ಷಗಳನ್ನು ಪರಿಹರಿಸುವ ಕಾರ್ಯವಿಧಾನಗಳನ್ನು ಬಲಪಡಿಸಲಾಗಿದೆ.

| | | |
|---|---|---|
| | | ➢ ವಾಣಿಜ್ಯ ನ್ಯಾಯಾಲಯದಲ್ಲಿ ಸಲ್ಲಿಸಲಾದ ದಾವೆಗಳು, ಅರ್ಜಿಗಳು ಮತ್ತು ಮೇಲ್ಮನವಿಗಳ ಸಂಖ್ಯೆ ಮತ್ತು ಬಾಕಿ ಇರುವ ಅಂತಹ ಪ್ರಕರಣಗಳ ಅಂಕಿಅಂಶಗಳನ್ನು ಕಾನೂನು ಇಲಾಖೆಯ ಅಂತರ್ಜಾಲ ತಾಣದಲ್ಲಿ ಸಾರ್ವಜನಿಕ ಡೊಮೇನ್ ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ.<br>➢ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳೀಕರಣಗೊಳಿಸಲಾಗಿದೆ.<br>➢ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಕೆಲವು ಮುಖ್ಯ ಎನ್.ಒ.ಸಿ/ಒಪ್ಪಿಗೆಗಳನ್ನು ಸ್ವಯಂ ಘೋಷಣ ಪತ್ರದ ಆಧಾರದ ಮೇಲೆ ಪಡೆಯಲು ಮತ್ತು 3 ವರ್ಷಗಳ ವರೆಗೆ ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002 ಕ್ಕೆ ತಿದ್ದುಪಡಿ ತರಲಾಗಿದೆ.<br>➢ ರಾಜ್ಯದಲ್ಲಿ ಸುಲಲಿತ ವ್ಯವಹಾರಕ್ಕೆ (EODB) ಒತ್ತು ನೀಡಲು ಹಾಗೂ ರಾಜ್ಯದಲ್ಲಿ ಇನ್ನೂ ಹೆಚ್ಚಿನ ಕೈಗಾರಿಕಾ ಸ್ನೇಹಿ ವಾತವರಣ ಸೃಷ್ಟಿಸಲು ಏಕ ಗವಾಕ್ಷಿ ಪೋರ್ಟಲ್ (Single Window Portal -SWP) ಅಭಿವೃದ್ಧಿಪಡಿಸಲಾಗಿದೆ ಹಾಗೂ ಇತರೆ ಸಂಬಂದಿಸಿದ ಇಲಾಖೆಗಳ ಸೇವೆಗಳನ್ನು ಸಂಯೋಜಿಸಲಾಗಿದೆ. ಹೊಸ ಏಕ ಗವಾಕ್ಷಿ ವ್ಯವಸ್ಥೆಯು ರಾಜ್ಯದಲ್ಲಿ ಹೂಡಿಕೆಗಳನ್ನು ಸುಗಮಗೊಳಿಸಲು ಮತ್ತು ತ್ವರಿತಗೊಳಿಸಲು ವ್ಯವಸ್ಥಿತ ಮತ್ತು ಡಿಜಿಟಲ್ - ಪ್ರಥಮ ವಿಧಾನ (Digital – First Approach) ಒದಗಿಸಿದೆ ಮತ್ತು ಎಲ್ಲಾ ಕೈಗಾರಿಕೆ ಚಟುವಟಿಕೆ ಸಂಬಂದಿತ ಬಂಡವಾಳ ಹೂಡಿಕೆ ಯೋಜನೆಗಳಿಗೆ ಒಂದೇಕಡೆ ಎಲ್ಲಾ ಅನುಮೋದನೆಗಳು/ ಮಂಜೂರಾತಿ/ ನಿರಾಕ್ಷೇಪಣೆಗಳನ್ನು ಪಡೆಯಲು ಅನುಕೂಲ ಕಲ್ಪಿಸಲಾಗಿದೆ.<br>➢ ಜಿಲ್ಲಾ ಮಟ್ಟದಲ್ಲಿಯೂ ಯೋಜನೆಗಳಿಗೆ ಅನುಮೋದನೆ ಪಡೆಯಲು Online ಅರ್ಜಿ ಸಲ್ಲಿಸಲು ಅವಕಾಶ ಕಲ್ಪಸಲಾಗಿದೆ.<br>ಸರ್ಕಾರದ ಅಧಿಸೂಚನೆ ಸಂಖ್ಯೆ: ದಿನಾಂಕ:10.09.2025 ರಲ್ಲಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961 ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ನ್ನು ತಿದ್ದುಪಡಿ ಮಾಡಿ “ಹೊಸ ಉದ್ಯಮಗಳನ್ನು ಸ್ಥಾಪಿಪಿಸುವುದಕ್ಕಾಗಿ 2 ಎಕರೆಗಳವರೆಗೆ ಕೃಷಿ ಭೂಮಿಯನ್ನು ಬಳಸಿದ್ದಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯನ್ನು ಬದಲಾಯಿಸುವುದು ಅಗತ್ಯವಿರತಕ್ಕದ್ದಲ್ಲ ಎಂಬ ಅಂಶವನ್ನು ಸೇರ್ಪಡೆ ಮಾಡಲಾಗಿರುತ್ತದೆ. |
| (ಇ) | ರಾಜ್ಯದಲ್ಲಿ Tier-II & Tier-III ನಗರಗಳಲ್ಲಿ ಸರ್ಕಾರವು ಸಣ್ಣ | ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕೈಗಾರಿಕಾ ನೀತಿ 2025-30 ರಲ್ಲಿ Tier-II & Tier-III ನಗರಗಳಲ್ಲಿನ ತಾಲ್ಲೂಕುಗಳನ್ನು ವಲಯ 1 ಮತ್ತು 2 ರಲ್ಲಿ ವರ್ಗೀಕರಿಸಿ ವಿಶೇಷ ಪ್ರೋತ್ಸಾಹ |

| | | |
|---|---|---|
| | ಕೈಗಾರಿಕಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಕ್ರಮಗಳೇನು; | ಮತ್ತು ರಿಯಾಯಿತಿಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ವಿವರಗಳನ್ನು ಅನುಬಂಧ -1 ರಲ್ಲಿ ಲಗತ್ತಿಸಿದೆ. |
| (ಈ) | ಸಣ್ಣ ಕೈಗಾರಿಕೆಗಳನ್ನು "ಭವಿಷ್ಯದ ಕಾರ್ಖಾನೆ"ಗಳನ್ನಾಗಿ ಮಾಡಲು ತಂತ್ರಜ್ಞಾನ ಅಳವಡಿಕೆ ಮತ್ತು ಉನ್ನತೀಕರಣವನ್ನು ಬೆಂಬಲಿಸಲು ಯಾವ ನಿರ್ದಿಷ್ಟ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ? | ಸಣ್ಣ ಕೈಗಾರಿಕೆಗಳನ್ನು "ಭವಿಷ್ಯದ ಕಾರ್ಖಾನೆ"ಗಳನ್ನಾಗಿ ಮಾಡಲು ತಂತ್ರಜ್ಞಾನ ಅಳವಡಿಕೆ ಮತ್ತು ಉನ್ನತೀಕರಣವನ್ನು ಬೆಂಬಲಿಸಲು 2025-30 ರ ಕೈಗಾರಿಕಾ ನೀತಿಯಡಿ ಈ ಕೆಳಕಂಡ ವಿಶೇಷ ರಿಯಾಯಿತಿಗಳನ್ನು ಅಳವಡಿಸಿ ಪ್ರೋತ್ಸಾಹಿಸಲಾಗುತ್ತಿದೆ.<br>a) Sustainability Initiative linked Incentives for MSME Investments,<br>b) Sustainability outcome Linked Incentives in INR basis KSPCB-CII Green co Rating Programme<br>c) Incentives for Recycling Facilities, Quality Certification support for MSMEs<br>d) Export Readiness Certification of Support for MSMEs |

**ಸಿಐ 169 ಎಸ್ಎಸ್ಐ 2025**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು.

# ಅನುಬಂಧ - 1

## ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 963 (1035)

### ಅ. ಕೈಗಾರಿಕಾ ನೀತಿ 2025-30

ಕರ್ನಾಟಕ ಸರ್ಕಾರವು 08.02.2025 ರಿಂದ ಹೊಸ ಕೈಗಾರಿಕಾ ನೀತಿ 2025-30 ನ್ನು ಜಾರಿಗೆ ತಂದಿದ್ದು ಇದರಡಿಯಲ್ಲಿ ಹೊಸ ಕೈಗಾರಿಕಾ ಘಟಕ ಸ್ಥಾಪಿಸುವ, ಹಾಲಿ ಇರುವ ಕೈಗಾರಿಕೆಯ ವಿಸ್ತರಣೆಗಾಗಿ/ ಆಧುನೀಕರಣಕ್ಕಾಗಿ/ ವೈವಿಧ್ದೀಕರಣಕ್ಕಾಗಿ ಬಂಡವಾಳ ಹೂಡುವ ಎಂ.ಎಸ್.ಎಂ.ಇ ಗಳಿಗೆ ಈ ಕೆಳಗಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳು ದೊರೆಯುತ್ತವೆ.

| | ಸಾಮಾನ್ಯ ಪ್ರವರ್ಗ | | | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕರು) | | |
|---|---|---|---|---|---|---|
| **1. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ** | | | | | | |
| | ವಲಯ-1 | ವಲಯ-2 | ವಲಯ-3 | ವಲಯ-1 | ವಲಯ-2 | ವಲಯ-3 |
| ಸೂಕ್ಷ್ಮ ಕೈಗಾರಿಕೆಗಳು | 30% ವಿ.ಎಫ್.ಎ (ಗರಿಷ್ಠ ರೂ.30ಲಕ್ಷ) | 25% ವಿ.ಎಫ್.ಎ (ಗರಿಷ್ಠ ರೂ.25 ಲಕ್ಷ) | 10% ವಿ.ಎಫ್.ಎ (ಗರಿಷ್ಠ ರೂ10 ಲಕ್ಷ) (ಕೇವಲ ಬೆಂಗಳೂರು ಗ್ರಾಮಾಂತರ) | 35% ವಿ.ಎಫ್.ಎ (ಗರಿಷ್ಠ ರೂ.35ಲಕ್ಷ) | 30% ವಿ.ಎಫ್.ಎ (ಗರಿಷ್ಠ ರೂ.30ಲಕ್ಷ) | 15% ವಿ.ಎಫ್.ಎ (ಗರಿಷ್ಠ ರೂ.15 ಲಕ್ಷ) (ಕೇವಲ ಬೆಂಗಳೂರು ಗಾಮಾಂತರ) |
| ಸೂಣ್ಣ ಕೈಗಾರಿಕೆಗಳು | 25% ವಿ.ಎಫ್.ಎ (ಗರಿಷ್ಠ ರೂ.200 ಲಕ್ಷ) | 20% ವಿ.ಎಫ್.ಎ (ಗರಿಷ್ಠ ರೂ.150 ಲಕ್ಷ) | 10% ವಿ.ಎಫ್.ಎ (ಗರಿಷ್ಠ ರೂ.50ಲಕ್ಷ) (ಕೇವಲ ಬೆಂಗಳೂರು ಗ್ರಾಮಾಂತರ) | 30% ವಿ.ಎಫ್.ಎ (ಗರಿಷ್ಠ ರೂ.225ಲಕ್ಷ) | 25% ವಿ.ಎಫ್.ಎ (ಗರಿಷ್ಠ ರೂ.175ಲಕ್ಷ) | 15% ವಿ.ಎಫ್.ಎ (ಗರಿಷ್ಠ ರೂ.75 ಲಕ್ಷ) |

**ಟಿಪ್ಪಣಿ: ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನವನ್ನು ಎರಡು ಕಂತಿನಲ್ಲಿ ಬಿಡುಗಡೆ ಮಾಡಲಾಗುವುದು.**

ವಿ.ಎಫ್.ಎ: ವ್ಯಾಲ್ಯು ಆಫ್ ಫಿಕ್ಸೆಡ್ ಅಸೆಟ್ಸ್

ಮಧ್ಯಮ ಕೈಗಾರಿಕೆಗಳು : ಹೂಡಿಕೆ ಉತ್ತೇಜನಾ ಸಹಾಯಧನದ ಕುರಿತು ಎರಡು ಆಯ್ಕೆಗಳನ್ನು ಕಲ್ಪಿಸಲಾಗಿರುತ್ತದೆ.

| ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ | | ಮಧ್ಯಮ ಕೈಗಾರಿಕೆಗಳಿಗೆ ಉತ್ಪಾದನಾ ಆಧಾರಿತ ಸಹಾಯಧನ |
|---|---|---|
| ಹೂಡಿಕೆ ಉತ್ತೇಜನಾ ಸಹಾಯಧನ ಘಟಕವು ಉತ್ಪಾದನೆ ಪ್ರಾರಂಭಿಸಿದ ನಂತರ 4 ಸಮ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು | | ಘಟಕದ ಉತ್ಪಾದನೆಯ ಆಧಾರದಲ್ಲಿ ಗರಿಷ್ಠ 7 ವರ್ಷ |
| ವಲಯ-1 | 25% ವಿ.ಎಫ್.ಎ (ಗರಿಷ್ಠ ರೂ.10 ಕೋಟಿ) | 2.5% ನಿವ್ವಳ ಉತ್ಪಾದನೆ (ಗರಿಷ್ಠ ಶೇ.60 ವಿ.ಎಫ್.ಎ) |
| ವಲಯ-2 | 20% ವಿ.ಎಫ್.ಎ (ಗರಿಷ್ಠ ರೂ.8 ಕೋಟಿ) | 2.0% ನಿವ್ವಳ ಉತ್ಪಾದನೆ (ಗರಿಷ್ಠ ಶೇ.60 ವಿ.ಎಫ್.ಎ) |
| ವಲಯ-3 | 10% ವಿ.ಎಫ್.ಎ (ಗರಿಷ್ಠ ರೂ.4 ಕೋಟಿ) (ಕೇವಲ ಬೆಂಗಳೂರು ಗ್ರಾಮಾಂತರ) | 1.0% ನಿವ್ವಳ ಉತ್ಪಾದನೆ (ಗರಿಷ್ಠ ಶೇ.30 ವಿ.ಎಫ್.ಎ) (ಕೇವಲ ಬೆಂಗಳೂರು ಗ್ರಾಮಾಂತರ) |

ಟಿಪ್ಪಣಿ: ಡಾ ನಂಜುಂಡಪ್ಪ ವರದಿಯ ಅನ್ವಯ ಹೆಚ್ಚುವರಿ ಉತ್ತೇಜನಾ ಸಹಾಯಧನವನ್ನು ಈ ಕೆಳಕಂಡಂತೆ ಕಲ್ಪಿಸಲಾಗಿದೆ

| | | |
|---|---|---|
| ಸೂಕ್ಷ್ಮ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಠ ರೂ.5ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಠ ರೂ.3ಲಕ್ಷ) |
| ಸಣ್ಣ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಠ ರೂ.10ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಠ ರೂ.5ಲಕ್ಷ) |
| ಮಧ್ಯಮ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಠ ರೂ.50ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಠ ರೂ.25 ಲಕ್ಷ) |
| ಮಧ್ಯಮ ಕೈಗಾರಿಕೆಗಳು (ಉತ್ಪಾದನಾ ಆಧಾರಿತ) | ಅತ್ಯಂತ ಹಿಂದುಳಿದ ತಾಲ್ಲುಕು | ಗರಿಷ್ಠ 5% ವಿ.ಎಫ್.ಎ |
| | ಹಿಂದುಳಿದ ತಾಲ್ಲೂಕು | ಗರಿಷ್ಠ 3% ವಿ.ಎಫ್.ಎ |

ಬಂಡವಾಳ ಹೂಡಿಕೆ ಸಹಾಯಧನವನ್ನು ಉದ್ಯಮಶೀಲರು ಹೂಡುವ ನಿವೇಶನ, ಕಟ್ಟಡ, ಯಂತ್ರೋಪಕರಣ ಇವುಗಳನ್ನು ಸ್ಥಿರಾಸ್ಥಿ (ವಿ.ಎಂಎ) ಎಂದು ಪರಿಗಣಿಸಿ ಇದರ ಶೇಕಡವಾರು ನೀಡಲಾಗುವುದು.

**2. ಎಂಎಸ್‌ಎAಇಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:**

| | |
|---|---|
| ಅರ್ಹತೆ<br>1.ರಾಜ್ಯ ಹಣಕಾಸು ನಿಗಮ,<br>2.ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,<br>3.ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು,<br>4.ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ,<br>5.ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್),<br>6.ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ,<br>7.ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ<br>ಮತ್ತಿತರ ಸಂಸ್ಥೆಗಳಿAದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು. | ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು [illegible]ಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು<br>1.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,<br>2.ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ,<br>3.ಕಿಯಾನಿಕ್ಸ್,<br>4.ಕೈಗಾರಿಕಾ ಸಹಕಾರ ಸಂಘಗಳು,<br>5.ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು,<br>6.ಆಹಾರ ಪಾರ್ಕ್‌ಗಳು,<br>7.ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಲಾಗುತ್ತದೆ. |
| **2.ಅ ಎಂಎಸ್ಎಂಇ ಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ** | |
| ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ದುಡಿಮೆ ಬಂಡವಾಳಕ್ಕೆ ಸ್ಟಾಂಪ್ ಶುಲ್ಕವನ್ನು ಉತ್ಪಾದನೆ ಪ್ರಾರಂಭಿಸಿದ 3 ವರ್ಷಗಳಲ್ಲಿ ಮಾತ್ರ ಕಲ್ಪಿಸಲಾಗಿದೆ. | |
| **2.ಆ ಎಂಎಸ್ಎಂಇ ಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ:** | |
| ವಲಯ 1, ವಲಯ 2 : ರೂ.1000/-ಕ್ಕೆ ರೂ.1/-<br>ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/- |
| **3. ಎಂಎಸ್ಎಂಇ ಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ** | |
| ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| **4. ಎಂಎಸ್ಎಂಇ ಗಳಿಗೆ ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ** | |
| ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ 1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| **5. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ಶಕ್ತಿ ಸಬ್ಸಿಡಿ** | |
| ವಲಯ 1 ಮತ್ತು 2 ಕ್ಕೆ ಮಾತ್ರ: ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿ ವರೆಗೆ ವಿದ್ಯುತ್ಶಕ್ತಿ ಸಬ್ಸಿಡಿ | |
| **6. ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ** | |
| **ಎಲ್ಲಾ ವಲಯಗಳಿಗೆ**<br>ಐಎಸ್‌ಒ ಸರಣಿ ಪ್ರಮಾಣೀಕರಣ<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)<br>ಎಫ್.ಎಸ್.ಎಸ್.ಎ.ಐ- ಅಗ್ಮಾರ್ಕ್<br>ಎಕೋಮಾರ್ಕ<br>ಝಿರೊ ಡಿಫೇಕ್ಟ ಝಿರೋ ಎಫೆಕ್ಟ (ಝೆಡ್)<br>ಐ.ಎಸ್.ಐ<br>ಫ್ರೂಟ್ ಪ್ರಾಡಕ್ಟ ಆರ್ಡರ್ (ಎಫ್.ಪಿ.ಒ)<br>ಬ್ಯೂರೋ ಆಫ್ ಎನರ್ಜಿ ಎಫೀಸಿಯೆನ್ಸಿ (ಬಿ.ಇ.ಇ)<br>ಯಾವುದೇ ಅಂತರಾಷ್ಟ್ರೀAಯ ಕ್ವಾಲಿಟಿ ಸರ್ಟಿಫಿಕೇಷನ್ ಭಾರತ ದೇಶ ಅಂಗೀಕರಿಸಿದ ಸರ್ಟಿಫಿಕೇಟ್ ಗಳು | ಒಟ್ಟು ಅರ್ಜಿಯ ಮೊತ್ತದ ಶೇ 50 ( ಗರಿಷ್ಠ ಮೊತ್ತ ರೂ.5.00ಲಕ್ಷ ಪ್ರತಿ ಅರ್ಜಿಗೆ) |